# ಗದ್ಯಪಾಠ – 4 ಕೈ ಬರಹ

## ಅಭ್ಯಾಸ

ಅ. ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಪಿಸುಮಾತಿನ ಗುಂಬಸ್ ಎಲ್ಲಿದೆ?

ಉ. ಪಿಸುಮಾತಿನ ಗುಂಬಸ್ ಬಿಜಾಪುರದಲ್ಲಿದೆ.

2. ಗೋಳಗುಮ್ಮಟದ ಸುತ್ತಳತೆ (ವ್ಯಾಸ) ಎಷ್ಟು ಅಡಿ ಇದೆ?

ಉ. ಗೋಳಗುಮ್ಮಟದ ಸುತ್ತಳತೆ 124 ಅಡಿ ಇದೆ.

3. ಫರ್ಡಿನೆಂಡ್ ಕಿಟೆಲ್ ಯಾವ ದೇಶದವರು?

ಉ. ಫರ್ಡಿನೆಂಡ್ ಕಿಟಲ್ ಜರ್ಮನ ದೇಶದವನು.

4. ಫರ್ಡಿನೆಂಡ್ ಕಿಟೆಲ್ ರಚಿಸಿದ ನಿಘಂಟಿನ ಹೆಸರೇನು?

ಉ. ಫರ್ಡಿನೆಂಡ್ ಕಿಟಲ್ ರಚಿಸಿದ ನಿಘಂಟಿನ ಹೆಸರು ಇಂಗ್ಲಿಷ್ ಕನ್ನಡ ನಿಘಂಟು.

5. ಫರ್ಡಿನೆಂಡ್ ಕಿಟೆಲ್ ರಚಿಸಿದ ನಿಘಂಟಿನಲ್ಲಿ ಎಷ್ಟು ಶಬ್ದಗಳಿವೆ?

ಉ. ಫರ್ಡಿನೆಂಡ್ ಕಿಟಲ್ ರಚಿಸಿದ ನಿಘಂಟಿನಲ್ಲಿ 70,000 ಸಾವಿರ ಶಬ್ದಗಳನ್ನು ಒಳಗೊಂಡಿದೆ.

6. ಮೈಸೂರು ಅರಮನೆಯ ವಾಸ್ತುಶಿಲ್ಪಿಗಳು ಯಾರು?

ಉ. ಮೈಸೂರು ಅರಮನೆಯ ವಾಸ್ತುಶಿಲ್ಪಿಗಳು ಬ್ರಿಟನ್ನಿನ ಹೆನ್ರಿ ಇರ್ವನ್ ಮತ್ತು ಭಾರತದ ಬಿ ರಾಘವಲು ನಾಯ್ಡು.

7. ಕಾಳಿ ನದಿಗೆ ಅಡ್ಡಲಾಗಿ ಕಟ್ಟಿರುವ ಜಲಾಶಯ ಎಲ್ಲಿದೆ?

ಉ. ಕಾಳಿ ನದಿಗೆ ಅಡ್ಡವಾಗಿ ಕಟ್ಟಿರುವ ಜಲಾಶಯ ಸೂಪದ ಬಳಿ ನಿರ್ಮಿಸಲಾಗಿದೆ.

ಆ. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಗೋಲಗುಂಬಸ್‌ನ ವಿಶೇಷವೇನು?

ಉ. ಗೋಲ್‌ಗುಂಬಸ್ ಇದು ಬಿಜಾಪುರದಲ್ಲಿದೆ ಗುಮ್ಮಟದಾಗ ಮೆಲ್ಲಗೆ ಮಾತಾನಾಡಿದ್ದರೂ ಆ ಧ್ವನಿ ಮತ್ತೆ ಕೇಳಿಸುತ್ತದೆ. ಪ್ರತಿಧ್ವನಿ ಆಗುತ್ತದೆ.

2. ಕಾಳಿ ನದಿ ಎಲ್ಲಿ ಹುಟ್ಟಿ, ಯಾವ ಮಾರ್ಗವಾಗಿ ಹರಿಯುತ್ತದೆ?

ಉ. ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಹಳಿಯಾಳ ಯಲ್ಲಾಪುರ ತಾಲ್ಲೂಕುಗಳಲ್ಲಿ ಹರಿದು ಕಾರವಾರ ಬಳಿ ಅರಬ್ಬೀ ಸಮುದ್ರ ಸೇರುತ್ತದೆ.

3. ಮೈಸೂರು ಅರಮನೆಯ ಸೊಬಗನ್ನು ವರ್ಣಿಸಿ.

ಉ. ಅರಮನೆಯ ಹೊರ – ಒಳ ನೋಟವು ಸುಂದರ, ಪ್ರತಿ ಭಾಗವೂ ಅತ್ಯುತ್ತಮವಾಗಿ ಅಲಂಕೃತಗೊಂಡಿದೆ ರಾತ್ರಿವೇಳೆ ಲಕ್ಷಾಂತರ ವಿದ್ಯುದ್ದೀಪಗಳಿಂದ ಕಂಗೊಳಿಸುತ್ತದೆ.

4. ಫರ್ಡಿನೆಂಡ್ ಕಿಟೆಲ್ ಭಾರತಕ್ಕೆ ಬಂದು ಮಾಡಿದ ಕೆಲಸವೇನು?

ಉ. ಫರ್ಡಿನೆಂಟ್ ಕಿಟೆಲ್ ಈತನು ಭಾರತ ದೇಶಕ್ಕೆ ಪಾದ್ರಿಯಾಗಿ ನೇಮಕಗೊಂಡನು, ಇಂಗ್ಲಿಷ್ ಭಾಷಿಕರು ಕನ್ನಡವನ್ನು ತಿಳಿಯಲು ಇಂಗ್ಲಿಷ್ ಕನ್ನಡ ನಿಘಂಟನ್ನು ಸಿದ್ಧಪಡಿಸಿದನು.

ಇ. ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1 ಉತ್ತಮ ಕೈಬರಹದ ಲಕ್ಷಣಗಳನ್ನು ಪಟ್ಟಿ ಮಾಡಿರಿ.

ಉ ಬರೆಯುವ ಅಕ್ಷರಗಳು ಸ್ಫುಟವಾಗಿರಬೇಕು. ಅಂದರೆ ಅಕ್ಷರಗಳು ಕಣ್ಣಿಗೆ ಸುಲಭವಾಗಿ ಗುರುತಿಸಿರು–ವಂತಿರಬೇಕು. ಅಕ್ಷರಗಳನ್ನು ತಪ್ಪಿಲ್ಲದೆ ಕಾಗುಣಿತ ದೋಷಗಳು ಇಲ್ಲದಂತೆ ಬರೆಯಬೇಕು. ಅಕ್ಷರಗಳು ಒಂದೇ ಗಾತ್ರದಲ್ಲಿರಬೇಕು. ಅಂದರೆ ಒಂದು ಚಿಕ್ಕದು ಒಂದು ದೊಡ್ಡದು ಆಗಿರಬಾರದು ಅಕ್ಷರದ ಪದ ಹಾಗೂ ಸಾಲುಗಳ ನಡುವೆ ನಿರ್ದಿಷ್ಟ ಅಂತರ ಬಲಕ್ಕೆ ಬಾಗಿಸಿ ಬರೆಯಬಾರದು ಅಂದರೆ ನೇರ ನಿಲುವು ಇರಬೇಕು ನಿರ್ದಿಷ್ಟ ವೇಗದಲ್ಲಿ ಬರೆಯುಬೇಕು ಚಿತ್ತುರಾಟು ಮಾಡಬಾರದು ನಿಮ್ಮ ಬರವಣಿಯನ್ನು ನೋಡಿ ಇತರರು ಸಂತೋಷಪಡಬೇಕು.

## ಭಾಷಾಭ್ಯಾಸ

ಅ. ನಿಘಂಟಿನ ಸಹಾಯದಿಂದ ಈ ಪದಗಳಿಗೆ ಅರ್ಥ ಬರೆಯಿರಿ

1. ಸೌಧ – ಭವನ
2. ನಿರ್ಮಾತೃ – ಸ್ವಂತ ರಚನೆಕಾರ
3. ಹಸ್ತಪ್ರತಿ – ಕೈಯಿಂದ ಬರೆಯುವ ಪ್ರತಿ
4. ಪರಿಷ್ಕರಿಸಿ – ತಿದ್ದುಪಡಿ
5. ತಾಣ – ಸ್ಥಳ
6. ಪಾದ್ರಿ – ಚರ್ಚ್‌ನ ಮುಖ್ಯಸ್ಥ

Scanned with CamScanner